ಕಾಯುತ್ತಿರುತ್ತಾರೆ. ಇದರಿಂದಾಗಿ ಸರ್ಕಾರಕ್ಕೆ ಲಾಸ್ ಆದರೂ ಪರವಾಗಿಲ್ಲ ಜನರಿಗೆ ಬಹಳ ಉಪಯೋಗವಾಗಿದೆ. ಆದರೆ ಇಲ್ಲಿ ವಸ್ತುಸ್ಥಿತಿ ಏನಾಗಿದೆ ಎಂದರೆ, ಈ ಮ್ಯಾಕ್ಸಿಕ್ಯಾಬ್‌ಗಳು ಸಿಂಗಲ್ ಟೈರ್ಸ್‌ನಲ್ಲಿ ಓಡಾಡುತ್ತಿವೆ, ಅದರಲ್ಲಿ ಜನರು ಕೂಡುತ್ತಾರೆ, ಇದರಿಂದಾಗಿ ಪ್ರತಿದಿವಸ ಬಹಳಷ್ಟು ಅಪಘಾತಗಳಾಗುತ್ತವೆ. ಉದಾಹರಣೆಗೆ ಹೇಳುವುದಾದರೆ, ನನಗೆ ಗೊತ್ತಿರುವ ಹಾಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರತಿದಿವಸ ಅಪಘಾತದಿಂದಾಗಿ ಸಾವಿಗೀಡಾಗುತ್ತಿದ್ದಾರೆ. ದಯಮಾಡಿ ತಾವು ಅವರಿಗೆ ಕೊನೆಪಕ್ಷ ಡಬಲ್‌ಟೈರ್ ಹಾಕಿ ಓಡಿಸುವುದಕ್ಕೆ ಹಾಗೂ ಪರವಾನಗಿ ಕೊಡುವುದಕ್ಕೆ ತಾವು ಒಂದು ಆದೇಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ : ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಮ್ಯಾಕ್ಸಿಕ್ಯಾಬ್‌ಗಳಿಗೆ ಪರವಾನಿಗಿ ಕೊಟ್ಟಾದ ಮೇಲೆ ಸಾರ್ವಜನಿಕರಿಂದ ನಮಗೆ ಕೆಲವು ಅಪಾದನೆಗಳು ಬಂದಿರುವುದು ನಿಜ. ಕೆಲವು ಭಾಗಗಳಲ್ಲಿ ಪರವಾನಿಗೆ ಇಲ್ಲದೆ ಮ್ಯಾಕ್ಸಿಕ್ಯಾಬ್‌ಗಳನ್ನು ಓಡಿಸುವುದು ಸತ್ಯಸಂಗತಿ. ಹಾಗೂ ಪರವಾನಗಿ ತೆಗೆದುಕೊಂಡು ಹಲವಾರು ಜನರನ್ನು ಕೂರಿಸಿಕೊಂಡು ಈ ರೀತಿ ಅಪಘಾತಕ್ಕೆ ಒಳಗಾಗಿರುವ ಸಂಗತಿ, ಎಲ್ಲಾ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಮಾನ್ಯ ಸದಸ್ಯರು, ಸಿಂಗಲ್ ಟೈರ್ಸ್ ಹಾಕಿ ಮ್ಯಾಕ್ಸಿಕ್ಯಾಬ್‌ಗಳನ್ನು ಓಡಿಸುವುದರಿಂದ ಸಾಕಷ್ಟು ಅಪಘಾತಗಳು ಉಂಟಾಗುತ್ತವೆ, ಆದ್ದರಿಂದ ಡಬಲ್ ಟೈರ್ಸ್ ಇರುವ ಮ್ಯಾಕ್ಸಿಕ್ಯಾಬ್‌ಗಳನ್ನು ಓಡಿಸುವಂತಹ ಪ್ರಯತ್ನಕ್ಕೆ ನಿಮ್ಮ ಕ್ರಮ ಏನು ಎಂದು ಕೇಳಿದ್ದಾರೆ. ಮ್ಯಾಕ್ಸಿಕ್ಯಾಬ್‌ನಲ್ಲಿ ಸುಮಾರು 13 ರಿಂದ 14 ಜನ ಪ್ರಯಾಣಿಕರಗಿಂತ ಜಾಸ್ತಿ ಕೂರಿಸಿಕೊಂಡು ಹೋಗಬಾರದು ಎನ್ನುವುದು ಇದೆ. ಆದರೆ ಕೆಲವು ಸಂದರ್ಭಗಳಲ್ಲಿ ಸುಮಾರು 30ರಿಂದ 40 ಜನರನ್ನು ಕೂರಿಸಿಕೊಂಡು ಹೋಗುವಂತಹ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಆದ್ದರಿಂದ, ಇದಕ್ಕೆ ಅನುಗುಣವಾಗಿ, ನಾವು ಕಾನೂನಿನ ಚೌಕಟ್ಟಿನಲ್ಲಿ ಇದನ್ನು ಪರಿಶೀಲಿಸಿ, ನಿಯಮಗಳಡಿಯಲ್ಲಿ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ನಾವು ಜಾರಿಗೆ ತರುತ್ತೇವೆ.

ಗಣಿ ಪ್ರಾರಂಭಿಸಲು ಇರುವ ನಿಬಂಧನೆಗಳು

189 - ಶ್ರೀ ವೈಜ್ಯನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಣಿ ಪ್ರಾರಂಭಿಸಲು ಇರುವ ನಿಬಂಧನೆಗಳೇನು?

ಆ) ಗಣಿಗಳಿಂದ ಜನರ ಜೀವನಕ್ಕೆ ತೊಂದರೆಯಾಗುವ ಪರಿಸ್ಥಿತಿ ಉದ್ಭವಿಸಿದರೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಕೇಂದ್ರ ಸರ್ಕಾರವು ಹೊರಡಿಸಿರುವ ಖನಿಜ ರಿಯಾಯಿತಿ ನಿಯಮಗಳು 1960ರ ಅಡಿಯಲ್ಲಿ ಮುಖ್ಯ ಖನಿಜಗಳ ಗಣಿಗಾರಿಕೆ ಪ್ರಾರಂಭಿಸುವ ಕುರಿತು ಕಾರ್ಯವಿಧಾನವನ್ನು ವಿವರಿಸಲಾಗಿದೆ. ಅದೇ ರೀತಿ ಉಪ ಖನಿಜಗಳ ಗಣಿಗಾರಿಕೆ ಬಗ್ಗೆ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು 1994ರಲ್ಲಿ ಕಾರ್ಯವಿಧಾನವನ್ನು ನೀಡಲಾಗಿದೆ.

ಆ) ನಿಯಮಗಳ ಅಡಿಯಲ್ಲಿ ನಮೂದಿಸಿರುವ ನಿಬಂಧನೆಗಳಿಗೆ ಒಳಪಟ್ಟು ಗಣಿಗುತ್ತಿಗೆ. ಪರವಾನಗಿಯನ್ನು ನೀಡಲಾಗುತ್ತಿದ್ದು ಸಾರ್ವಜನಿಕರಿಗೆ ತೊಂದರೆಯಾಗುವ ಪರಿಸ್ಥಿತಿ ಉದ್ಭವಿಸಿರುತ್ತದೆಯೆಂದು ತಿಳಿದು ಬಂದಲ್ಲಿ ಅಂತಹ ಸ್ಥಿತಿಯಲ್ಲಿ ನಿಯಮ ರೀತ್ಯ ಕ್ರಮಕೈಗೊಂಡು ಗಣಿಗುತ್ತಿಗೆ ಪರವಾನಗಿಯನ್ನು ನೀಡಿದ್ದಲ್ಲಿ ಅವುಗಳನ್ನು ರದ್ದು ಪಡಿಸಲಾಗುವುದು.

ಶ್ರೀ ವೈಜನಾಥ ಪಾಟೀಲ್ : ಮೈನ್ಸ್ ಲೈಸನ್ಸ್ ಪಡೆದುಕೊಂಡಿರುವ ಕೆಲವು ಲೀಸ್ ಹೋಲ್ಡರ್ಸ್ ಹೆಚ್ಚಾಗಿ ಕಾನೂನುಬಾಹಿರವಾಗಿ ಉಪಯೋಗ ಮಾಡುತ್ತಿದ್ದಾರೆ. ವಿಶೇಷವಾಗಿ ಗುಲ್ಬರ್ಗಾ ಜಿಲ್ಲೆಯ ಶಹಬಾದ್‌ಸ್ಟೋನ್ ಬಹಳ ಪ್ರಸಿದ್ಧಿಯಾದ ಸ್ಟೋನ್. ಇಲ್ಲಿ ಅನೇಕ ದೊಡ್ಡ ದೊಡ್ಡ ಫ್ಯಾಕ್ಟರಿಗಳು ಇವೆ. ಇವರಿಗೆ ಎಷ್ಟು ಜಾಗವನ್ನು ಕೊಟ್ಟಿರುತ್ತಿರೋ ಅದಕ್ಕಿಂತ ಹೆಚ್ಚಿನ ಜಾಗವನ್ನು ಎಕ್ಸ್‌ಪ್ಲಾಯಿಟೇಷನ್ ಮಾಡಿಕೊಳ್ಳುತ್ತಾರೆ. ಕಲ್ಲಿನ ಕಿಮ್ಮತ್ತು ಬಹಳ ಕಡಿಮೆಯಾದರೂ ಕೋಟ್ಯಾಂತರ ರೂ.ಗಳನ್ನು ಅಲ್ಲಿಂದ ಅವರು ಸುಲಿಗೆ ಮಾಡಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ, ಕಲ್ಲಿನ ರೇಟ್‌ನ್ನು ಹೆಚ್ಚು ಮಾಡಬೇಕು. ಚಿಂಚೋಳಿಯಲ್ಲಿ ಕೂಡ ಇದೇ ಪರಿಸ್ಥಿತಿ ನಿರ್ಮಾಣವಾಗಿದೆ. ಕ್ವಾರಿ ಮಾಲೀಕರು ಅಲ್ಲಿ ಸಿಕ್ಕಾಪಟ್ಟೆ ಗಣಿಯನ್ನು ಕೆದರಿ (ಅಗೆದುಕೊಂಡು) ಹೋಗಿಬಿಡುತ್ತಾರೆ. ಅಲ್ಲಿ ಮಕ್ಕಳು, ದನ ಕರುಗಳು, ಬಿದ್ದು ಸತ್ತಿವೆ. ಆದ್ದರಿಂದ ಅವರ ಮೇಲೆ ಒಂದು ಷರತ್ತನ್ನು ವಿಧಿಸಬೇಕು. ಗಣಿಗಾಗಿ ಆಳವಾಗಿ ಅಗೆದುಕೊಂಡಿರುವ ಜಾಗವನ್ನು ಮುಚ್ಚುವಂತಹ ವ್ಯವಸ್ಥೆ ಸರ್ಕಾರ ಮಾಡಿಸಬೇಕು. ಇಲ್ಲದಿದ್ದರೆ ಅವರ ಲೈಸನ್ಸ್ ಕ್ಯಾನ್ಸಲ್ ಮಾಡಿಸಬೇಕು. ಇದರ ಜೊತೆಗೆ ಅವರು ಎಷ್ಟು ಕೆಲಸ ಮಾಡಿದ್ದಾರೆ, ಅದರ ಪ್ರಕಾರ ಅವರು ಟ್ಯಾಕ್ಸ್ ಕಟ್ಟುತ್ತಾರೋ ಇಲ್ಲವೋ ಎಂಬುದನ್ನೂ ಕೂಡ ತಾವು ತಿಳಿಸಬೇಕು. ಏಕೆಂದರೆ ಟ್ಯಾಕ್ಸ್ ಕಟ್ಟುವುದು, ಅಳತೆ ಮಾಡುವುದು ಇದಕ್ಕೆ ಬೇರೆ ಅವಕಾಶವಿಲ್ಲ. ಎಷ್ಟು ಫೀಟ್ ಆಳವಾಗಿ ಅಗೆದಿದ್ದಾರೆ. ಎಷ್ಟು ಫೀಟ್ ಆಳವಾಗಿ ಕಲ್ಲನ್ನು ತೆಗೆದುಕೊಂಡು ಹೋಗಿದ್ದಾರೆ, ಎಷ್ಟರಮಟ್ಟಿಗೆ ಅವರು ಫೀಯನ್ನು ತುಂಬಿದ್ದಾರೆ ಎಂಬುದನ್ನು ತಾವು ನೋಡಬೇಕಾಗುತ್ತದೆ. ಈ ಕ್ರಮವನ್ನು ತಾವು ಕೈಗೊಂಡಿದ್ದೇ ಆದರೆ ಸರ್ಕಾರಕ್ಕೆ ಕೋಟ್ಯಾಂತರ ರೂ.ಗಳ ಲಾಭ ಬರುತ್ತದೆ. ಹಾಗೂ ಜನರಿಗೆ ಇದರಿಂದಾಗುವ ತೊಂದರೆ ತಪ್ಪುತ್ತದೆ ಎನ್ನುವುದು ನನ್ನ ಭಾವನೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಸಿ. ಗುರುನಾಥ್ : ಗುಲ್ಬರ್ಗಾ ಜಿಲ್ಲೆಯಲ್ಲಿ ಸುಣ್ಣದ ಕಲ್ಲಿನ ಉಪಯೋಗ ಹಚ್ಚಾಗಿದೆ. ಇಲ್ಲಿ ದೊಡ್ಡ ದೊಡ್ಡ ಸೀಮೆಂಟ್ ಕಾರ್ಖಾನೆಗಳಿವೆ. ಇಂತಹ ಕಾರ್ಖಾನೆಗಳಲ್ಲಿ ಸುಣ್ಣದಕಲ್ಲಿನ ಉಪಯೋಗ ಜಾಸ್ತಿ ಇದ್ದು. ಇದರ ರಾಯಲ್ಟಿ ಸರ್ಕಾರಕ್ಕೆ ಬರಬೇಕು ಎನ್ನುವುದರ ಬಗ್ಗೆ ಯಾವುದೇ ಲೆಕ್ಕಪತ್ರ ಇಲ್ಲ. ಅವರು ಸಿಮೆಂಟ್ ಉತ್ಪಾದನೆಯಾದ ನಂತರ ಸುಣ್ಣದ ಕಲ್ಲು ಇಷ್ಟು ಉಪಯೋಗವಾಗಿದೆ ಎಂದು ಒಂದು ಆಧಾರವನ್ನು ಇಟ್ಟುಕೊಂಡಿದ್ದಾರೆ. ಅವರ ಹತ್ತಿರ ಯಾವುದೇ ಒಂದು ವೇಬ್ರಿಡ್ಜ್ ಇರುವುದಿಲ್ಲ. ಇದಕ್ಕಾಗಿ ಗಣಿ ಇಲಾಖೆಯಿಂದ ಇವರಿಗೆ ಸಂಬಂಧಪಟ್ಟಂತೆ ಮೈನಿಂಗ್‌ನಲ್ಲಿ ಒಂದು ವೇಬ್ರಿಡ್ಜ್ ಆಗಬೇಕು. ಇದಕ್ಕೆ ವೇಮೆಂಟ್ ಮಾಡಿಕೊಂಡು ಸುಣ್ಣದ ಕಲ್ಲನ್ನು ಸಿಮೆಂಟ್ ಕಾರ್ಖಾನೆಗಳಲ್ಲಿ ಎಷ್ಟು ಉಪಯೋಗವಾಗುತ್ತಿದೆ ಎಂಬುದನ್ನು ನೋಡಬೇಕು. ಸಾಕಷ್ಟು ಕಡೆ ಕಾನೂನು ಬಾಹಿರವಾಗಿ ಕೆಲಸ ಮಾಡುತ್ತಿರುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಶಹಾಬಾದ್ ಅಕ್ಕಪಕ್ಕದಲ್ಲಿರುವ ಚಿತ್ತಾಪುರ್

ತಾಲ್ಲೂಕಿನಲ್ಲಿ ಒಂದು ಮೈನಿಂಗ್ ಇದೆ, ಇದರ ಬಗ್ಗೆ ನಾವು ದೂರನ್ನು ಕೊಟ್ಟರೂ ಕೂಡ ಅಲ್ಲಿ ಕಾನೂನು ಬಾಹಿರವಾಗಿ ಡಿಗ್ಗಿಂಗ್ ಮಾಡುತ್ತಿದ್ದಾರೆ. ಇದಕ್ಕಾಗಿ ಕಡ್ಡಾಯವಾಗಿ ಪರವಾನಿಗೆಯನ್ನು ಪಡೆದುಕೊಳ್ಳುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ವೈಜನಾಥ ಪಾಟೀಲ್‌ರವರು ಚಿಂಚೋಳಿ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಸ್ಟೋನ್ ಅನ್ನು ಕ್ವಾರಿ ಮಾಡತಕ್ಕಂಥದ್ದರ ಬಗ್ಗೆ ಹೇಳಿದ್ದಾರೆ. ಪರವಾನಿಗೆ ಕೊಟ್ಟಿರುವುದಕ್ಕಿಂತ ಹೆಚ್ಚಿಗೆ ಜಾಗವನ್ನು ಅಲ್ಲಿ ಉಪಯೋಗಿಸಿಕೊಂಡಿರುವುದಲ್ಲದೆ ಇವರು ಮಾಡುವ ಕೆಲಸಕ್ಕೆ ಸರ್ಕಾರಕ್ಕೆ ರಾಯಲ್ಟಿ ಕೊಡದಿರುವುದನ್ನೂ ಕೂಡ ಪ್ರಸ್ತಾಪಿಸಿದ್ದಾರೆ. ನಾನು ಅವರಿಗೆ ಸರ್ಕಾರದ ವತಿಯಿಂದ ಒಂದು ಆಶ್ವಾಸನೆಯನ್ನು ಕೊಡಬಯಸುತ್ತೇನೆ. ಚಿಂಚೋಳಿಯಲ್ಲಿ ಎಷ್ಟು ಜನ ಕಾನೂನಿನಡಿಯಲ್ಲಿ ಮೈನಿಂಗ್ ಲೈಸನ್ಸ್ ಪಡೆದುಕೊಂಡಿದ್ದಾರೆ? ಎಷ್ಟು ಕ್ಷೇತ್ರಗಳಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ? ಅವರಿಗೆ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳೇನು? ಹಾಗೂ ಅವರು ಸರ್ಕಾರಕ್ಕೆ ಕೊಡುತ್ತಿರುವ ರಾಯಲ್ಟಿಯನ್ನು ಸರಿಯಾದ ಸಮಯಕ್ಕೆ ಪಾವತಿ ಮಾಡಿದ್ದಾರೋ? ಇಲ್ಲವೋ ಎಂಬುದನ್ನೂ ಕೂಡ ಕೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ಯಾವುದಾದರೂ ಒಂದು ನಿರ್ದಿಷ್ಟವಾದ ಮಾಹಿತಿಯನ್ನು ನಮಗೆ ಕೊಟ್ಟರೆ, ಅದರ ಬಗ್ಗೆ ನಾವು ಕೂಡಲೇ ತನಿಖೆ ನಡೆಸಿ, ಕ್ರಮವನ್ನು ಕೈಗೊಳ್ಳುತ್ತೇವೆ. ಆದರೂ ಚಿಂಚೋಳಿ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ, ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ, ಅವರಿಂದ ಸೂಕ್ತ ಮಾಹಿತಿ ತರಿಸಿ, ಅದರ ವಿವರವಾದ ಒಂದು ಉತ್ತರವನ್ನು ಕೊಡುತ್ತೇವೆ.

ಇನ್ನು ಮಾನ್ಯ ಗುರುನಾಥ್‌ರವರು ಪ್ರಸ್ತಾಪ ಮಾಡಿದ ವಿಷಯಕ್ಕೆ ಹೇಳುವುದಾದರೆ, ಸಿಮೆಂಟ್ ಉತ್ಪಾದನೆಗೆ ಅತಿ ಮುಖ್ಯವಾದ ಕಚ್ಚಾಪದಾರ್ಥವೆಂದರೆ ಈ ಸುಣ್ಣದ ಕಲ್ಲು. ಇದನ್ನು ಉಪಯೋಗಿಸಿಕೊಂಡು ಅಲ್ಲಿ ಸಾಕಷ್ಟು ಸಿಮೆಂಟ್ ಫ್ಯಾಕ್ಟರಿಗಳು ಉತ್ಪಾದನೆ ಮಾಡುತ್ತಿವೆ. ಇದರ ರಾಯಲ್ಟಿಯನ್ನು ನಾವು ವಸೂಲು ಮಾಡುವುದಕ್ಕೆ ಆನ್ ದಿ ಬೇಸಿನ್ ಆಫ್ ದಿ ಪ್ರೊಡಕ್ಷನ್ ಆಫ್ ಸಿಮೆಂಟ್. ಅವರು ಎಷ್ಟು ಸಿಮೆಂಟನ್ನು ಉತ್ಪಾದನೆ ಮಾಡುತ್ತಾರೆ ಎನ್ನುವ ಒಂದು ಪಟ್ಟಿಯನ್ನು ಕೊಡಬೇಕಾಗುತ್ತದೆ, ಇದರ ಆಧಾರದ ಮೇಲೆ ನಾವು ರಾಯಲ್ಟಿಯನ್ನು ನಿಗದಿ ಮಾಡುತ್ತೇವೆ. ಆದರೆ ಕೆಲವು ಸಂದರ್ಭದಲ್ಲಿ ಅವರು ಕೊಡುವ ಫಿಗರ್ಸ್ ಸರಿಯಾಗಿ ಇಲ್ಲದಿರುವುದರಿಂದ, ಹಾಗೂ ಸುಣ್ಣದ ಕಲ್ಲನ್ನು ಜಾಸ್ತಿ ಉಪಯೋಗಿಸಿ, ಸಿಮೆಂಟ್ ಉತ್ಪಾದನೆ ಮಾಡುವುದನ್ನು ಕಡಿಮೆ ಮಾಡಿ, ರಾಯಲ್ಟಿ ಕಡಿಮೆ ಮಾಡುವ ಸಾಧ್ಯತೆ ಇದೆ. ಇದರ ಬಗ್ಗೆ ಸರ್ಕಾರ ಪರಿಶೀಲಿಸಿ, ಸರ್ಕಾರಕ್ಕೆ ಕೊಟ್ಟಿರುವ ವಿವರಗಳು ತಪ್ಪಿದೆ ಎಂದು ಎಲ್ಲಾದರೂ ಕಂಡುಬಂದರೆ, ಆ ಲೈಸನ್ಸನ್ನು ರದ್ದು ಮಾಡುವುದಕ್ಕೆ ಏನು ಕ್ರಮ ಕೈಗೊಳ್ಳಬೇಕು ಅದನ್ನು ನಾವು ಕೈಗೊಳ್ಳುತ್ತೇವೆ ಎನ್ನುವ ಭರವಸೆಯನ್ನು ಸರ್ಕಾರದ ವತಿಯಿಂದ ಮಾನ್ಯ ಸದಸ್ಯರಿಗೆ ನೀಡುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಕೆಲವು ಫಾರೆಸ್ಟ್ ಲ್ಯಾಂಡ್‌ಗಳು ಮುಳುಗಡೆಯಾಗುತ್ತಿವೆ. ಮೈಸೂರಿನಲ್ಲಿ ಮಿನರಲ್ಸ್ ಮುಖಾಂತರ ಮೈನಿಂಗ್ ನಡೆದು ಲಕ್ಷಗಟ್ಟಲೆ ಟನ್ ಅಲ್ಲಿ ಹಾಗೆಯೇ ಉಳಿದುಕೊಂಡಿದೆ. ಅದು ಮುಳುಗಡೆ ಆಗುವ ಸ್ಥಿತಿಗೆ ಬಂದಿದೆ. ಅಲ್ಲಿ ಏನಾಗಿದೆ ಎಂದರೆ ಒಬ್ಬರ

ಮೇಲೆ ಮತ್ತೊಬ್ಬರು ಹೇಳುವುದು ನಡೆದಿದೆ. ಹೀಗಾಗಿ ಅಲ್ಲಿ ಲಿಫ್ಟ್ ಮಾಡುವುದಕ್ಕೆ ಆಗುತ್ತಿಲ್ಲ. ಇದನ್ನು ಸರ್ಕಾರವೆ ಲಿಫ್ಟ್ ಮಾಡಲಿ, ಮೈಸೂರು ಮಿನರಲ್ಸ್‌ರವರೇ ಲಿಫ್ಟ್ ಮಾಡಲಿ ಅಥವಾ ನಿಮ್ಮ ಕಂಟ್ರಾಕ್ಟರ್ಸ್‌ಸೇ ಲಿಫ್ಟ್ ಮಾಡಲಿ, ಯಾರಾದರೂ ಸರಿ ಇದನ್ನು ಲಿಫ್ಟ್ ಮಾಡಿಸಿ ಏಕೆಂದರೆ ಇದು ಒಂದು ದೊಡ್ಡ ಆಸ್ತಿ. ಅಲ್ಲಿ ಪರಿಸರ ನಾಶಕ್ಕೆ ಬದಲಾಗಿ, ಮುಳುಗಡೆ ಆಗತಕ್ಕಂಥ ಪ್ರದೇಶಗಳಲ್ಲಿರುವ, ಈಗಾಗಲೇ ಆಗೆದಿರತಕ್ಕಂಥ ಏನೇನು ಮಿನರಲ್ಸ್ ಇದೆಯೋ ಅದನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎಂ. ಸಿ. ನಾಣಯ್ಯ : ಕಾನೂನಿನಡಿಯಲ್ಲಿ ಏನು ಇದೆಯೋ ನನಗೆ ಅರ್ಥವಾಗುತ್ತಿಲ್ಲ, ನಾವು ಇದನ್ನು ಮಾಡಲೇಬೇಕಾಗುತ್ತದೆ. ಸುಪ್ರೀಂಕೋರ್ಟಿನ ಒಂದು ಆದೇಶ ಬಂದಮೇಲೆ, ಅದರ ಪ್ರಕಾರ 1980ನೇ ಇಸವಿಯ ನಂತರ ಕೊಟ್ಟಿರುವ ಗಣಿಗಾರಿಕೆಗೆ ಕೇಂದ್ರ ಸರ್ಕಾರದ ಅನುಮತಿ ಪಡೆದು ಕೊಂಡು ನಾವು ಪರವಾನಗಿಯನ್ನು ಕೊಡಬೇಕಾಗಿತ್ತು. ಆದರೆ 1980ನೇ ಇಸವಿಗಿಂತ ಮುಂಚೆ ನಾವು ಲೈಸನ್ಸ್ ಕೊಟ್ಟಿದ್ದರೆ, ಅದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕಾಗಿಲ್ಲ. ಕೆಲವು ಸಂದರ್ಭಗಳಲ್ಲಿ ಏನಾಗಿದೆ ಎಂದರೆ, ಅವರಿಗೆ ಕೊಟ್ಟಿರುವ ಅವಧಿ ಮುಗಿದಿರುವ ಹಿನ್ನೆಲೆಯಲ್ಲಿ, ಅವರು ಪುನಃ ಕೇಂದ್ರ ಸರ್ಕಾರದ ಅನುಮತಿ ಪಡೆದುಕೊಳ್ಳಲೇಬೇಕು. ಆದರೆ ಕೆಲವು ಭಾಗಗಳಲ್ಲಿ ತಾವು ಕ್ವಾರಿ ಮಾಡಿ ಇಟ್ಟುಕೊಂಡು ಈಗ ಅದನ್ನು ಸಾಗಾಣಿಕೆ ಮಾಡುವ ಸಂದರ್ಭ ಬಂದಾಗ ಕಾನೂನು ಇಲಾಖೆಯವರು ನಮ್ಮ ಒಪೀನಿಯನ್ ಕೇಳಿದರು. ಆಗ ನಾವು ಸ್ಪಷ್ಟವಾಗಿ, ಈಗಾಗಲೇ ಎಲ್ಲಿ ಗಣಿಗಾರಿಕೆ ಮಾಡಿದ್ದಾರೆ ಅದನ್ನು ನೀವು ಸಾಗಾಣಿಕೆ ಮಾಡಬೇಕಾದರೆ ಸರ್ಕಾರಕ್ಕೆ ಕೊಡಬೇಕಾದ ರಾಯಲ್ಟಿಯನ್ನು ಕೊಟ್ಟು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅದು ನ್ಯಾಷನಲ್ ವೇಸ್ಟಾಗುತ್ತದೆ. we should not do it ಎಂದು ಈಗಾಗಲೇ ನಮ್ಮ ಇಲಾಖೆಯ ವತಿಯಿಂದ ಒಪಿನೀಯನ್ ಕೊಟ್ಟಿದ್ದೇವೆ. ತಾವು ಯಾವುದಾದರೂ ಒಂದು ನಿರ್ದಿಷ್ಟವಾದ ಮಾಹಿತಿ ಇದ್ದರೆ ಕೊಡಿ, ಆಗ ನಾವು ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಉಪಾಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಲಿಖಿತ ಮೂಲಕ ಉತ್ತರಿಸುವ ಹದಿಮೂರನೆ ಪ್ರಶ್ನೆಗಳ ಪಟ್ಟಿಯಲ್ಲಿನ ಒಟ್ಟು 50 ಪ್ರಶ್ನೆಗಳ ಪೈಕಿ 28 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ರೈತರ ಅಧ್ಯಯನ ಪ್ರವಾಸ

719 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿವಿಧ ಸ್ಥಳಗಳಿಗೆ ಅಧ್ಯಯನ ಪ್ರವಾಸದ ಮೇಲೆ ರಾಜ್ಯದಿಂದ ಕಳುಹಿಸಿರುವ ರೈತರ ಸಂಖ್ಯೆ ಎಷ್ಟು?